ಪ್ರಧಾನ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ ನ್ಯಾಯಾಲಯ, ಹುಣಸೂರು

**ಸಿ.ಸಿ. ನಂ. 113/2017**

ಸಿ.ಡಬ್ಲ್ಯೂ-1 ಪಿ.ಡಬ್ಲ್ಯೂ -1

ದಿಃ **14.03.2023** ರಂದು ಸಾಕ್ಷಿಗೆ ಪ್ರಮಾಣವಚನ ಬೋಧಿಸಲಾಯಿತು.

| | |
|---|---|
| ಸಾಕ್ಷಿಯ ಹೆಸರು | ದೊರೆಸ್ವಾ ಮಿ |
| ಗಂಡ/ತಂದೆಯ ಹೆಸರು | ಸಿದ್ದೇಗೌಡ |
| ವಯಸ್ಸು | ಸುಮಾರು **39** ವರ್ಷ |
| ಕೆಲಸ | ವ್ಯವಸಾಯ |
| ವಾಸಸ್ಥಳ | ಮೊದುರು ಪಿ.ಕೊಪ್ಪಲು ಗ್ರಾಮ |

( 2 ರಿಂದ 4 ನೇ ಆರೋಪಿತರು ಗೈರುಹಾಜರಿದ್ದು, ಅವರ ಗುರುತನ್ನು ತಕರಾರು ಮಾಡುವುದಿಲ್ಲ ಎಂಬ ಷರತ್ತಿಗೆ ಒಳಪಟ್ಟಂತೆ ಸಾಕ್ಷ್ಯ ತೆಗೆದುಕೊಳ್ಳಲಾಯಿತು).

**ಮುಖ್ಯ ವಿಚಾರಣೆ ಸಹಾಯಕ ಸರ್ಕಾರಿ ಅಭಿಯೋಜಕರಿಂದಃ**

ಚಾಸಾ-2 ನನ್ನ ತಾಯಿ. ದಿಃ24-08-2015 ರಂದು ಸಂಜೆ 5.00 ಗಂಟೆ ಸಮಯದಲ್ಲಿ ನಮ್ಮ ಮನೆಯ ಮುಂಭಾಗ ನಮಗೆ ಸೇರಿದ ಜಾಗದಲ್ಲಿ ದನಗಳನ್ನು ಕಟ್ಟಿದ್ದು, 1 ನೇ ಆರೋಪಿ ಇಲ್ಲಿ ಯಾಕೆ ದನ ಕಟ್ಟಿ ಹಾಕಿದ್ದೀಯಾ, ಬೋಳಿ ಮಗನೆ ಎಂದು ಅವಾಚ್ಯವಾಗಿ ಬೈದು, ಅಲ್ಲೇ ಇದ್ದ 2 ನೇ ಆರೋಪಿ ದೊಣ್ಣೆಯಿಂದ ನನ್ನ ಬಲಗಾಲಿಗೆ ಹಾಗೂ ತಲೆಯ ಹಿಂಭಾಗಕ್ಕೆ ಹೊಡೆದಿರುತ್ತಾನೆ. 2 ನೇ ಆರೋಪಿ ನನ್ನನ್ನು ತಬ್ಬಿ ಹಿಡಿದಿದ್ದು, ಉಳಿದ ಆರೋಪಿತರೆಲ್ಲರೂ ಸೇರಿ ಕೈಯಲ್ಲಿ ಹೊಟ್ಟೆಗೆ ತಿವಿದು, ನನ್ನ ಕುತ್ತಿಗೆ ಹಿಡಿದು ಹಿಸುಕಿದರು. ಚಾಸಾ-2 ರವರು ಗಲಾಟೆಯನ್ನು ಬಿಡಿಸಲು ಮುಂದಾದಾಗ 3 ಮತ್ತು 4 ನೇ ಆರೋಪಿತರು ಚಾಸಾ-2 ರವರಿಗೆ ಹಲ್ಲೆ ಮಾಡಿರುತ್ತಾರೆ. ಚಾಸಾ-4 ರವರು ನನ್ನನ್ನು ಸರ್ಕಾರಿ ಆಸ್ಪತ್ರೆಗೆ ಕರೆತಂದು ದಾಖಲಿಸಿರುತ್ತಾರೆ. ಈ ಸಂಬಂಧ ಗ್ರಾಮಸ್ಥರಿಗೆ ವಿಚಾರವನ್ನು ತಿಳಿಸಿದ್ದು, ಆರೋಪಿತರು ರಾಜಿಗೆ ಬರದೇ ಇದ್ದುದ್ದರಿಂದ ಆಸ್ಪತ್ರೆಯಲ್ಲಿ ದೂರು ಕೊಟ್ಟಿರುತ್ತೇನೆ. ಸಾಕ್ಷಿಗೆ ಗಣಕೀಕೃತ ದೂರನ್ನು ತೋರಿಸಿದ್ದು, ಅದರಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು, ಅದನ್ನು ನಿಪಿ-1 ಎಂದು, ಸಾಕ್ಷಿಯ ಸಹಿಯನ್ನು ನಿಪಿ-1(ಎ) ಎಂದು ಗುರುತಿಸಲಾಯಿತು. ಸಾಕ್ಷಿಗೆ ಮಹಜರ್ ತೋರಿಸಿದ್ದು, ಅದರಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು, ಅದನ್ನು ನಿಪಿ-2 ಎಂದು, ಸಾಕ್ಷಿಯ ಸಹಿಯನ್ನು ನಿಪಿ-2(ಎ) ಎಂದು ಗುರುತಿಸಲಾಯಿತು.

ದಿಃ04-09-2015 ರಂದು ಪೊಲೀಸರು ನಮ್ಮ ಗ್ರಾಮದ ಬಳಿ ಬಂದಿದ್ದು, ಅಲ್ಲಿ ನಾನು ಹಾಜರಿದ್ದು, ಘಟನಾ ಸ್ಥಳವನ್ನು ತೋರಿಸಿದ ಮೇರೆಗೆ ನಿಪಿ-2 ರಂತೆ ಬೆಳಿಗ್ಗೆ 10.00 ರಿಂದ 11.00 ರವರೆಗೆ ಚಾಸಾ-5 ಮತ್ತು 6 ರವರ ಸಮಕ್ಷಮ ಮಹಜರ್ ಕ್ರಮ ಕೈಗೊಂಡು, ನಿಪಿ-2 ರಡಿಯಲ್ಲಿ ಹಾಜರುಪಡಿಸಿದ ದೊಣ್ಣೆಯನ್ನು ಅಮಾನತುಪಡಿಸಿಕೊಂಡು, ನಿಪಿ-2 ಕ್ಕೆ ಅಲ್ಲಿಯೇ ನನ್ನ ಸಹಿ ಪಡೆದಿರುತ್ತಾರೆಂದರೆ ಸರಿಯಲ್ಲ. ನ್ಯಾಯಾಲಯದ ಮುಂದಿರುವ ದೊಣ್ಣೆಯಿಂದಲೇ ಆರೋಪಿತರು ನನ್ನ ಮೇಲೆ ಹಲ್ಲೆ ಮಾಡಿರುತ್ತಾರೆ. ಸಾಕ್ಷಿ ನೋಡಿ ಗುರುತಿಸಿದ ದೊಣ್ಣೆಯನ್ನು ಮು.ಮಾ-1 ಎಂದು ಗುರುತಿಸಲಾಯಿತು. ನನ್ನ ಮೇಲೆ ಹಲ್ಲೆ ಮಾಡಿದ ವ್ಯಕ್ತಿಗಳನ್ನು ನಾನು ನೋಡಿ ಗುರುತಿಸುತ್ತೇನೆ. ಸಾಕ್ಷಿ ನ್ಯಾಯಾಲಯದ ಮುಂದಿರುವ 1 ನೇ ಆರೋಪಿಯನ್ನು ನೋಡಿ ಗುರುತಿಸಿರುತ್ತಾರೆ. ಆರೋಪಿತರೆಲ್ಲರೂ ಕತ್ತರಿಸಿ ಹಾಕುವುದಾಗಿ ಬೆದರಿಕೆ ಹಾಕಿರುತ್ತಾರೆ. ಆರೋಪಿತರಿಗೂ, ನಮಗೂ ಜಾಗದ ವಿಚಾರವಾಗಿ ಜಗಳವಾಗಿರುತ್ತದೆ.

**ಪಾಟೀಸವಾಲುಃ ಆರೋಪಿತರ ಪರ ಶ್ರೀ ಹೆಚ್.ವಿ.ವಿ. ವಕೀಲರಿಂದಃ**

ಪಾಟೀಸವಾಲಿಗೆ ಕಾಲಾವಕಾಶ ಕೋರಿದ್ದು, ಸಕಾರಣಗಳು ಇಲ್ಲದೇ ಇರುವುದರಿಂದ ಪಾಟೀಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.

ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು.

ಓ ಹೇ ಕೇ ಸರಿ ಇದೆ.

ಪ್ರಧಾನ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ,
ಹುಣಸೂರು.